



ತೂಗು ಸೇತುವೆ



ಸ್ಟಿಂಗ್ ರೇ



ದೋಣಿವಿಹಾರದ್ದು. 'ಮ್ಯಾಂಗ್ರೋ ಕಾಡು' ಟಾನ್ ಜಂಗರು ಎನ್ನುವ ಊರಿಗೆ ದೋಣಿಯಲ್ಲಿ ಪ್ರಯಾಣಿಸಿದರೆ ದಡದಲ್ಲಿ ಮರಗಳ ಸಾಲು ಸಾಲು. ದೋಣಿಯಲ್ಲಿಯೇ ಗುಪ್ತ ಕಂದಕ 'ಸುಣ್ಣಕಲ್ಲು ಗುಹೆ'ಯನ್ನು ದಾಟಿದೆವು. ಸಣ್ಣ ಮತ್ತು ದೊಡ್ಡ ಬಾವಲಿಗಳ ದರ್ಶನವಾಯಿತು. ಗುಹೆಯಲ್ಲಿ ಒಂದೆಡೆ ಇಳಿದು ನಡೆದಾಗ ಏರ್‌ಕಂಡಿಷನ್ ಕೋಣೆಯಲ್ಲಿರುವ ಅನುಭವ–ವಾಯಿತು. ದಾರಿಯಲ್ಲಿ ಕೋತಿಗಳಿಗೆ ಮತ್ತು ಹದ್ದುಗಳಿಗೆ ಆಹಾರ ಹಾಕುವ ಜಾಗಗಳಲ್ಲಿ ನಾವಿಕ ದೋಣಿ ನಿಲ್ಲಿಸಿದ. ಬ್ರಾಹ್ಮಿನಿ ಕೈಟ್ ಮತ್ತು ಬಿಳಿಎದೆಯ ಹದ್ದುಗಳು ಕಂಡವು. ವೈವಿಧ್ಯಮಯ ಮತ್ಸ್ಯಲೋಕದ ದರ್ಶನವೂ ಆಯಿತು. ಆರ್ಚರ್ ಫಿಶ್, ಮಶ್ರೂಮ್ ಸ್ಟಿಂಗ್ ರೇ, ಟ್ರೆವಿಲ್ಲೀ ಮತ್ತು ಸ್ಟಿಬಾಸ್!

ಲ್ಯಾನ್ಕಾವಿ ಅಕ್ವೇರಿಯಂ ಚೆನ್ನಾಗಿದೆ. ಇಲ್ಲಿರುವ ಬೆಕ್ಕಿಗೆ ಇರುವಂತೆ ಮೀಸೆಗಳಿದ್ದ ಪೆಂಗ್ವಿನ್‌ಗಳು ಗಮನ ಸೆಳೆದವು. ಇವುಗಳಿಗೆ ಆಹಾರ ಕೊಡುವ ದೃಶ್ಯ ಮುದ ನೀಡುವಂಥದು.

ಮನರಂಜನೆಗೆ ಲ್ಯಾನ್ಕಾವಿ ದ್ವೀಪದಲ್ಲಿ ಸಾಕಷ್ಟು ಅವಕಾಶಗಳಿವೆ. ಹೈಕಿಂಗ್, ಸೈಕ್ಲಿಂಗ್ ಮತ್ತು ಜಲಕ್ರೀಡೆಗಳಿಗೆ ಇದು ಹೆಸರುವಾಸಿ. ನಾವು ಉಳಿದುಕೊಂಡಿದ್ದ ಹಾಲಿಡೇ ವಿಲ್ಲಾದಲ್ಲೂ ಸಾಕಷ್ಟು ಮನರಂಜನೆಯ ಅವಕಾಶಗಳಿದ್ದವು. ದೊಡ್ಡದಾದ ಈಜುಕೊಳ, ಪಕ್ಕದಲ್ಲೇ ಸಮುದ್ರ, ಜೆಟ್‌ಸ್ಕೀ, ಪ್ಯಾರಾಗ್ಲೈಡಿಂಗ್ ಮತ್ತು ದೋಣಿವಿಹಾರದ ವ್ಯವಸ್ಥೆಗಳಿದ್ದವು. ರಜಾಕಾಲ ಕಳೆಯಲು ಲ್ಯಾನ್ಕಾವಿ ದ್ವೀಪ ಹೇಳಿ ಮಾಡಿಸಿದ ತಾಣ.